**ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.ರವರ ನ್ಯಾಯಾಲಯ, ಶ್ರೀರಂಗಪಟ್ಟಣ.**

**ಕ್ರಿಮಿನಲ್ ಮೊಕದ್ದಮೆ ಸಂಖ್ಯೆ : 34/2024**

**ಚಾ.ಸಾ. :- 18**
**ಪ್ರಾ.ಸಾ. :- 03**

| | | |
|---|---|---|
| ಹೆಸರು | : | ವಿಜಯ್ ಕುಮಾರ್ |
| ತಂದೆಯ ಹೆಸರು | : | ತಾತೇಗೌಡ |
| ವಯಸ್ಸು | : | 46 ವರ್ಷ |
| ಉದ್ಯೋಗ | : | ಸಿ.ಹೆಚ್.ಸಿ., ಕೆ.ಆರ್.ಸಾಗರ ಪೊ.ಠಾಣೆ |
| ವಾಸಸ್ಥಳ | : | ಶ್ರೀರಂಗಪಟ್ಟಣ. |

---

**ಪ್ರಮಾಣೀಕರಿಸಲಾದ ದಿನಾಂಕಃ- 16.02.2026.**

**<u>ಮುಖ್ಯ ವಿಚಾರಣೆ : ಮಾನ್ಯ ಸ.ಸ.ಅ.ರವರಿಂದ :</u>**

ನಾನು 2020 ರಿಂದ ಜನವರಿ-2025 ರ ಅವಧಿಯಲ್ಲಿ ಶ್ರೀರಂಗಪಟ್ಟಣ ಟೌನ್ ಪೊಲೀಸ್ ಠಾಣೆಯಲ್ಲಿ ಹೆಚ್.ಸಿ.ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕಃ 20.01.2024 ರಂದು ನಾನು ಠಾಣೆಯಲ್ಲಿ ಕರ್ತವ್ಯದಲ್ಲಿದ್ದಾಗ ಚಾ.ಸಾ-1 ರವರು ನೀಡಿದ ಲಿಖಿತ ದೂರನ್ನು ಪಡೆದುಕೊಂಡು ಪ್ರಕರಣವನ್ನು ದಾಖಲು ಮಾಡಿಕೊಂಡು, ಪ್ರ.ವ.ವರದಿಯನ್ನು ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ.

ದೂರನ್ನು ಈಗ ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ-1 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-1(ಬಿ) ಎಂದು ಗುರುತಿಸಲಾಯಿತು. ಪ್ರ.ವ.ವರದಿಯನ್ನು ಈಗ ನೋಡುತ್ತಿದ್ದು ಅದನ್ನು ನಿಪಿ-4 ಎಂದು ಸಾಕ್ಷಿಯ ಸಹಿಯನ್ನು ನಿಪಿ-4(ಎ) ಎಂದು ಗುರುತಿಸಲಾಯಿತು.

ನಂತರ ಕೃತ್ಯ ಸ್ಥಳಕ್ಕೆ ಹೋಗಿ ಪಂಚರ ಸಮಕ್ಷಮದಲ್ಲಿ ಕೃತ್ಯ ಸ್ಥಳದ ಮಹಜರನ್ನು ತಯಾರು ಮಾಡಿರುತ್ತೇನೆ. ಸದರಿ ಮಹಜರನ್ನು ಈಗ ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ-2 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-2(ಬಿ) ಎಂದು ಗುರುತಿಸಲಾಯಿತು. ಮಹಜರ್ ಸಮಯದಲ್ಲಿ ಕಚ್ಚಾ ನಕಾಶೆಯನ್ನು ತಯಾರು ಮಾಡಿರುತ್ತೇನೆ ಹಾಗೂ ಅಪಘಾತ ಸ್ಥಳದ ಫೋಟೋಗಳನ್ನು ತೆಗೆಯಿಸಿರುತ್ತೇನೆ. ಅಪಘಾತ ಸ್ಥಳದ 1 ಫೋಟೋವನ್ನು ಈಗ ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ-3 ಎಂದು ಗುರುತಿಸಲಾಗಿದೆ.

ನಂತರ, ಪ್ರಕರಣದ ಕಡತವನ್ನು ಪ್ರಕರಣದ ದಿನಚರಿಯೊಂದಿಗೆ ಚಾಸಾ-20 ರವರು ಪಡೆದುಕೊಂಡಿರುತ್ತಾರೆ.

**<u>ಪಾಟೀ ಸವಾಲು : ಆರೋಪಿ ಪರ ವಕೀಲರಿಂದ :</u>**

ದೂರು ಪಡೆಯುವುದಕ್ಕೂ ಮುಂಚೆ ಅಪಘಾತದ ಬಗ್ಗೆ ದಿನಾಂಕಃ 10.01.2024 ರಂದು ಆಸ್ಪತ್ರೆಯಿಂದ ಮೆಮೋ ಬಂದಿದ್ದು ಗಾಯಾಳುವಿನ ಸಂಬಂಧಿಕರು ದೂರು ಕೊಡಲು ಬಂದಿಲ್ಲದ ಕಾರಣ ಪ್ರ.ವ.ವರದಿಯನ್ನು ದಾಖಲು ಮಾಡಿಲ್ಲ. ದಿನಾಂಕಃ 10.01.2024 ರಂದು ನಾನು ಕರ್ತವ್ಯದಲ್ಲಿರಲಿಲ್ಲ.

ಸದರಿಯವರು ಮೃತಪಡುವುದಕ್ಕೂ ಮುಂಚೆ ಅಪಘಾತದ ಬಗ್ಗೆ ತನಿಖೆ ಮಾಡಿಲ್ಲ. 10 ದಿನ ತಡವಾಗಿ ದೂರು ದಾಖಲಾಗಿರುತ್ತದೆ. ಆ ಮಧ್ಯೆದಲ್ಲಿ ಗಾಯಾಳುವಿನ ಕುಟುಂಬದವರನ್ನು ಪತ್ತೆ ಹಚ್ಚಲು ಪ್ರಯತ್ನ ಪಟ್ಟಿಲ್ಲ. ಸದರಿ ಅಪಘಾತ ರಾಜ್ಯ ಹೆದ್ದಾರಿಯಲ್ಲಾಗಿರುತ್ತದೆ ಎಂದರೆ ಸರಿ.

ತಡವಾಗಿ ಸ್ಥಳ ಮಹಜರ್ ಮಾಡಿರುವುದರಿಂದ ಅಪಘಾತ ಸ್ಥಳದಲ್ಲಿ ಅಪಘಾತಕ್ಕೆ ಸಂಬಂಧಿಸಿದಂತೆ ಯಾವುದೇ ಕುರುಹುಗಳಿರಲಿಲ್ಲ ಎಂದರೆ ಸರಿ. ಅಪಘಾತ ಸ್ಥಳದಲ್ಲಿ ರಸ್ತೆ ಏರುಮುಖವಾಗಿತ್ತು ಎಂದರೆ ಸರಿ. ಸದರಿ ಜಾಗದಲ್ಲಿ ಯು ಟರ್ನ್ ತೆಗೆದುಕೊಳ್ಳಲು ಅವಕಾಶವಿರುತ್ತದೆ ಎಂದರೆ ಸಾಕ್ಷಿ ಆ ಜಾಗದಿಂದ ಮುಂದೆ ಹೋದಾಗ

ಅಪಘಾತವಾಗಿರುತ್ತದೆ ಎನ್ನುತ್ತಾರೆ. ರಸ್ತೆ ಉಬ್ಬು ಇರುವುದರಿಂದ ವಾಹನಗಳು ನಿಧಾನವಾಗಿ ಹೋಗುತ್ತವೆ ಎಂದರೆ ಸುಳ್ಳು.

ಆರೋಪಿ ತಪ್ಪಿನಿಂದ ಅಪಘಾತವಾಗದೇ ಇದ್ದರೂ ದೂರುದಾರರ ಕುಟುಂಬಕ್ಕೆ ಸಹಾಯ ಮಾಡಲು ಸುಳ್ಳು ದೂರಿನ ಆಧಾರದ ಮೇಲೆ ಸುಳ್ಳು ಪ್ರಕರಣವನ್ನು ದಾಖಲು ಮಾಡಿರುತ್ತೇನೆ ಎಂದರೆ ಸರಿಯಲ್ಲ.

ನಾನು ಸ್ಥಳಕ್ಕೆ ಭೇಟಿ ಕೊಟ್ಟಿಲ್ಲ ಹಾಗೂ ಪ್ರಕರಣಕ್ಕೆ ಅನುಕೂಲವಾಗುವಂತೆ ಸ್ಥಳ ಮಹಜರ್, ಕಚ್ಚಾ ನಕಾಶೆ ತಯಾರು ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿದಾರರ ಹೇಳಿಕೆಗಳನ್ನು ಪ್ರಕರಣಕ್ಕೆ ಅನುಕೂಲವಾಗುವಂತೆ ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ತನಿಖಾ ಸಮಯದಲ್ಲಿ ಆರೋಪಿಯ ತಪ್ಪು ಇರುವುದಿಲ್ಲವೆಂದು ಕಂಡು ಬಂದಿರುತ್ತದೆ ಎಂದರೆ ಸರಿಯಲ್ಲ.

ಆರೋಪಿ ಯಾವುದೇ ತಪ್ಪು ಮಾಡದಿದ್ದರೂ ದೂರುದಾರರ ಕುಟುಂಬಕ್ಕೆ ವಿಮೆ ಪರಿಹಾರ ಕೊಡಿಸುವ ಸಲುವಾಗಿ ಸುಳ್ಳು ದಾಖಲಾತಿ ಸೃಷ್ಟಿಸಿ, ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ :- ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಈ ದಿನ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಓದಲಾಗಿದೆ.

**ಪ್ರಧಾನ ಹಿರಿಯ ಸಿಜೆ ಮತ್ತು**
**ಜೆ.ಎಂ.ಎಫ್.ಸಿ., ಶ್ರೀರಂಗಪಟ್ಟಣ.**

**ಸಾಕ್ಷಿದಾರರ ಸಹಿ.**